ಕಡೆ ಮೆತ್ತಗೆ ನಡೆದುಕೊಂಡು ಬರುತ್ತಿದ್ದರು. ಅಷ್ಟೊತ್ತಿಗಾಗಲೇ ವಿದ್ಯಾರ್ಥಿಗಳ ಮತ್ತು ಪೊಲೀಸರ ನಡುವೆ ಪಾಸ್‌ಪೋರ್ಟ್ ವೆರಿಫಿಕೇಶನ್ನಿನ ಏಜೆಂಟ್‌ಗಿರಿ ಮಾಡುತ್ತಿದ್ದ, ಕೊನೆಯ ವರ್ಷ ಓದುತ್ತಿದ್ದ ವಿನಯ್ ಕುಲಕರ್ಣಿ ಓಡಿ ಬಂದು 'ಏನ್ ಸರ್ ಇಷ್ಟು ದೂರ, ಏನಾಯಿತು?' ಎಂದು ಕೇಳಿದ್ದಕ್ಕೆ ಪೊಲೀಸರು, 'ನಿಮ್ಮ ಹುಡುಗರು ಸೂಳೆಯೊಬ್ಬಳನ್ನು ಕರೆದುಕೊಂಡು ಬಂದಿದ್ದಾರಂತೆ' ಎಂದರು.

'ನಿಮಗೆ ಯಾರು ಹೇಳಿದರು ಸಾರ್?'

'ಸುಮ್ನೇ ಬರತೀವಾ, ಇವರನ್ನು ಮಲ್ಲೇಶ್ವರದಿಂದ ಕರೆದುಕೊಂಡ ಬಂದ ಆಟೊ ಡ್ರೈವರೇ ಹೇಳಿ ಹೋಗಿದ್ದಾನೆ. ಅದಕ್ಕೇ ನಮ್ಮ ಸಾಹೇಬರು ಒಂದು ಸಲ ನೋಡುಕೊಂಡು ಬನ್ನಿ ಅಂತ ಕಳಿಸಿದರು.'

'ಆ ತರ ಹುಡುಗರು ಯಾರೂ ಇಲ್ಲ ಸಾರ್, ಎಲ್ಲ ತುಂಬ ಬಡತನದಿಂದ ಬಂದವರು, ಕಲಿಯೋಕೆ ಬಹಳ ಹುಷಾರು. ಚಟ ಮಾಡುವವರಲ್ಲ. ಕೂಲ್‌ಡ್ರಿಂಕ್ಸ್ ಬಿಡಿ, ಇನ್ನೂ ಹಾಲೇ ಕುಡಿತಾರೆ, ತುಂಬಾ ಗಾಂಧಿಗಳು, ಮನೆ ಬಿಟ್ಟು ದೂರ ಉಳಿಯೋದರಿಂದ ಒಂದು ಬ್ಯಾಚಲ್ಲಿ ಒಬ್ಬರು ಇಬ್ಬರು ರಾತ್ರಿಯೆಲ್ಲ ಅಳತಾರೆ. ಅಂತವರು ಹೀಗೆ ಮಾಡತಾರಾ... ಮತ್ತೆ ಕಾಲೇಜಿನವರು ಕೂಡಾ ಸಿಗರೇಟ್ ಸೇದುವವರನ್ನೂ ಹುಡುಕಿ ಹುಡುಕಿ ಪಾಲಕರನ್ನು ಕರೆಸುತ್ತಾರೆ... ಮತ್ತೆ ಇಲ್ಲಾ, ನಾನು ಸೇದಿಲ್ಲಾ ಅಂದರೆ ಮನೆಗೆ ಅಷ್ಟೇ...'

'ಅಣ್ಣಾ ಕುಲಕರ್ಣಿ... ತುಂಬಾ ಹತ್ತಿಸಬೇಡ... ನಮಗೂ ಪೊಲೀಸ್ ಟ್ರೈನಿಂಗ್ ಆಗಿದೆ. ಅಷ್ಟೆಲ್ಲ ಗಾಂಧಿ ಅಲ್ಲ ನಿಮ್ಮ ಹುಡುಗರು. ಪಕ್ಕದಲ್ಲೇ ಲೇಡಿಸ್ ಹಾಸ್ಟೆಲ್ ಇದೆ... ಇದೊಂದು ಹೇಳಲಿಲ್ಲ ಪುಣ್ಯಕ್ಕೆ... ಮೊನ್ನೆಯಷ್ಟೇ ಹೋಗಿ ಎಲ್ಲರಿಗೂ ರಾಖಿ ಕಟ್ಟಿ ಬಂದ್ವಿ ಸಾರ್ ಎಂದು... ಯಾವುದಕ್ಕೂ ನಾಳೆ ಅಥವಾ ಸೋಮವಾರ ಒಮ್ಮೆ ಸಾಹೇಬರನ್ನು ಒಮ್ಮೆ ಭೇಟಿಮಾಡಿ ಏನು ಹೇಳತೀರೋ ಹೇಳಿ' ಎಂದು ಪೊಲೀಸರು ಹೇಳುತ್ತಿದ್ದಂತೆಯೇ ಅವರಿಗೆ ಗೊತ್ತಿಲ್ಲದಂತೆ ಕುಲಕರ್ಣಿ ಅವರನ್ನು ತಿರುಗಿ ನಡೆಸಿಕೊಂಡು 'ಎ' ಬ್ಲಾಕ್ ದಾಟಿ ಮತ್ತೆ ಗೇಟು ಹತ್ತಿರ ಕರೆದುಕೊಂಡು ಬಂದುಬಿಟ್ಟಿದ್ದ. 'ಯಾವುದಕ್ಕೂ ನಾನು ಸೋಮವಾರ ಸ್ಟೇಶನ್ನಿಗೆ ಬರಬೇಕು. ಮೂರು ವೆರಿಫಿಕೇಶನ್ ಸಬ್‌ಮೀಟ್ ಮಾಡುವುದಿದೆ. ಮತ್ತೆ ಆ ಥರ ಎಲ್ಲಾದರೂ ಗಮನಿಸಿದರೆ ಅವರನ್ನು ನಾನೇ ಎಳೆದುಕೊಂಡು ಬರಿತೀನಿ ಸಾರ್' ಎಂದು ಬೀಳ್ಕೊಟ್ಟ.

★★★

ಪರಸ್ಪರ ಕೇಳಿಕೊಳ್ಳದಿದ್ದರೂ ಏನಿಲ್ಲವೆಂದರೂ ಸುಮಾರು ಹದಿನೈದು ಜನ 'ಬಶೀರ ಎಲ್ಲಿ ಬಶೀರ ಎಲ್ಲಿ' ಎಂದು ಹುಡುಕುತ್ತಿದ್ದರು. ಅವನು ಅವನ ರೂಮಿನಲ್ಲಂತೂ ಇರಲಿಲ್ಲ. ಟೀವಿ ರೂಮಿನಲ್ಲಿ ಬೆಳಕು ಉರಿಯುತ್ತಿತ್ತು. ಟೀವಿ ಬಾಕ್ಸಿನಲ್ಲೂ ಟೀವಿ ಹಾಗೇ ಇತ್ತು. ಎಲ್ಲರೂ ಟೀವಿ ರೂಮಿಗೆ ಬಂದು ಅದರ ಬಾಕ್ಸಿನ ಬಾಗಿಲು ತೆಗೆದು ಟೀವಿ ಇದೆಯಾ ಎಂದು ಖಾತ್ರಿ ಮಾಡಿದ ಮೇಲೆ ಯಾರೂ ಟೀವಿ ಹಚ್ಚದೇ ಅದರ ಬಾಕ್ಸಿನ ಬಾಗಿಲು ಹಾಕಿ ಸುಮ್ಮನೆ ಹೋಗುತ್ತಿದ್ದರು.

ಎರಡು ವರ್ಷಕ್ಕಿಂತ ಹೆಚ್ಚು ಕಾಲ ಹಾಸ್ಟೆಲಿನಲ್ಲಿ ಉಳಿದುಕೊಂಡ ವಿದ್ಯಾರ್ಥಿಗಳಿಗೆ ಬಶೀರನ ಇನ್ನೊಂದು ರೀತಿಯಲ್ಲಿ ಪರಿಚಿತ, ಆತ್ಮೀಯನಿದ್ದ. ಪ್ರತೀ ಶುಕ್ರವಾರ ರಾತ್ರಿ ಏನಿಲ್ಲವೆಂದರೂ ಸುಮಾರು ಇಪ್ಪತ್ತು ಇಪ್ಪತ್ತೈದು ಜನರಿಗೆ ರಾತ್ರಿ ಹೊಸ ಇಂಗ್ಲಿಷ್ ಆ್ಯಕ್ಷನ್ ಚಿತ್ರ ತೋರಿಸುವುದು. ಮೊದಲ ಚಿತ್ರ ಮುಗಿದ ನಂತರ ಖಾತ್ರಿ ಜನರಿಗೆ ಒಂದು ಒಳ್ಳೆಯ ಪ್ರಿಂಟ್‌ನ ನೀಲಿ ಚಿತ್ರ ತೋರಿಸಿ ಹಣ ತೆಗೆದುಕೊಳ್ಳುವುದು. ಇದು ಸುಮಾರು ಮೂರು ತಿಂಗಳಿಂದ ನಡೆಯುತ್ತಿತ್ತು. ಹಾಸ್ಟೆಲಿಗೆ ವಿ.ಎಚ್. ಎಸ್ ತಂದಿದ್ದಾರೆ ಎನ್ನುವ ಗುರುತು ಹತ್ತಿರದ ಯಾವ ಅಂಗಡಿ, ಯಾರಿಗೂ ಸಿಗಬಾರದೆಂದು ಪ್ರತೀವಾರ ಸುಮಾರು ಹತ್ತು ಕಿಲೋಮೀಟರ್ ದೂರ ಹೋಗಿ ಅಂದರೆ ಮೈಸೂರು ರೋಡಿನಲ್ಲಿರುವ